ಅಸಲು ದಾವಾ ಸಂಖ್ಯೆ: - **45/2015** ಪಿ.ಡಬ್ಲ್ಯೂ:-**1**

ದಿನಾಂಕಃ **14-07-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ **1** ರಿಂದ **3** ಮತ್ತು **5** ರ ಪರ ವಕೀಲರಿಂದ :-</u>

ನನ್ನ ತಾತನ ಹೆಸರು ರಂಗಪ್ಪ. ಅವರು ಮೃತರಾದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಂದೆ 1999 ಹಾಗೂ ನನ್ನ ದೊಡ್ಡಪ್ಪ 1993 ನೇ ಇಸವಿಯಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆ ಮತ್ತು ದೊಡ್ಡಪ್ಪರವರ ಮರಣ ಪ್ರಮಾಣ ಪತ್ರ ಗಳನ್ನು ತೆಗೆದುಕೊಂಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ . ನನ್ನ ತಾತನಿಗೆ ಪಿತ್ರಾರ್ಜಿತವಾಗಿ ಯಾವುದೇ ಸ್ವತ್ತುಗಳು ಬಂದಿರುವುದಿಲ್ಲ. ದಾವಾ ಸ್ವತ್ತುಗಳು ಮತ್ತು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳು ಸರ್ಕಾರದಿಂದ ಮಂಜೂರಾದ ಸ್ವತ್ತುಗಳು ಎಂದರೆ ಸರಿ. ದಾವಾ ಅನುಸೂಚಿ 1 ನೇ ಸ್ವತ್ತು ನನ್ನ ಅಜ್ಜಿಯು ಖರೀದಿಸಿದ ಸ್ವತ್ತು . ದಾವಾ ಅನುಸೂಚಿ 1 ನೇ ಸ್ವತ್ತಿನ ಕ್ರಯ ಪತ್ರವು 1 ನೇ ಪ್ರತಿವಾದಿ ಮತ್ತು ಅವರ ತಾಯಿಯಾದ ಶೇಷಮ್ಮರವರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಲಾಗಿದೆ ಎಂದರೆ ಸರಿ. ನನ್ನ ಅಜ್ಜಿ 1993 ನೇ ಸಾಲಿನಲ್ಲಿ ಪೌತಿಯಾಗಿರುತ್ತಾರೆ. ಅವರು ಪೌತಿಯಾದ ಬಳಿಕ ದಾವಾ ಅನುಸೂಚಿ 1 ನೇ ಸ್ವತ್ತಿನ ಪಹಣಿಯು ಪೌತಿ ವಾರಸು ಮೂಲಕ 1 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. 2012 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯು ಸದರಿ ಸ್ವತ್ತನ್ನು ತನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

ದಾವಾ ಅನುಸೂಚಿ 1 ನೇ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ಅದರ ಮೇಲೆ ನನಗೆ ಯಾವುದೇ ರೀತಿಯ ಹಿಸ್ಸೆಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿ ಮೃತರಾದ ಬಳಿಕ ದಾವಾ

ಅನುಸೂಚಿ 1 ನೇ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿಯ ಹೆಸರಿಗೆ ಎಂ . ಆರ್ ನಂ. 6/97-98 ರಂತೆ ದಾಖಲಾಗಿರುತ್ತದೆ ಎಂದರೆ ಸರಿ . ಸದರಿ ಮ್ಯುಟೇಷನ್ ನ್ನು ನಾನು ಪ್ರಶ್ನಿಸಿರುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಅನುಸೂಚಿ 1 ನೇ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಅನುಸೂಚಿ 2 ರಿಂದ 8 ಮತ್ತು ಪ್ರತಿವಾದ ಪತ್ರದ ಷಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತುಗಳಲ್ಲಿ ಹಿಸ್ಸೆಯನ್ನು ನೀಡುವಂತೆ ಕೇಳಿದಾಗ ನಾವು ಅವರಿಗೆ ಹಿಸ್ಸೆ ಕೊಡವುದನ್ನು ತಪ್ಪಿಸುವ ಉದ್ದೇಶದಿಂದ ದಾವಾ ಅನುಸೂಚಿ 1 ನೇ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿರುತ್ತೇವೆ ಎಂದರೆ ಸರಿಯಲ್ಲ. 1984 ರಿಂದ 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ದಾವಾ ಅನುಸೂಚಿ 1 ನೇ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಆಗಲೀ , 4 ನೇ ಪ್ರತಿವಾದಿ ಆಗಲೀ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ದಾವಾ ಅನುಸೂಚಿ 1 ನೇ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿದ್ದುದರಿಂದ ಅವರು ನನ್ನ ಮತ್ತು 4 ನೇ ಪ್ರತಿವಾದಿಯ ವಿರುದ್ಧ ಅಸಲು ದಾವಾ ಸಂ.46/15 ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಈ ದಾವೆಯನ್ನು ದಾಖಲಿಸಿದ ಬಳಿಕ ಅವರು ಸದರಿ ದಾವೆಯನ್ನು ದಾಖಲಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ಪ್ರಾರಂಭದಲ್ಲಿ ನಾನು ದಾವಾ ಅನುಸೂಚಿ 1 ನೇ ಸ್ವತ್ತಿಗೆ ಮಾತ್ರ ದಾವೆಯನ್ನು ಹೂಡಿದ್ದೇನು ಎಂದರೆ ಸರಿ. 1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿದ ಬಳಿಕ ದಾವಾ ಅನುಸೂಚಿ 2 ರಿಂದ 8 ನೇ ಸ್ವತ್ತುಗಳನ್ನು ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇನೆ ಎಂದರೆ ಸರಿ. ದಾವಾ ಅನುಸೂಚಿ 2 ರಿಂದ 8 ನೇ ಸ್ವತ್ತುಗಳಲ್ಲಿ ನನ್ನ ಅಜ್ಜನ ಕಾಲದಿಂದಲೂ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿಯು

ಮುಂದುವರೆದು ನನ್ನ ಅಜ್ಜಿಯು ಇದ್ದಾಗಿನಿಂದಲೂ ವ್ಯವಸಾಯ ಮಾಡುತ್ತಿದ್ದೇವೆ ಎಂದು ಉತ್ತರಿಸಿರುತ್ತಾರೆ. ದಾವಾ ಅನುಸೂಚಿ 2 ರಿಂದ 8 ಮತ್ತು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. 1 ನೇ ಪ್ರತಿವಾದಿಗೆ ದಾವಾ ಅನುಸೂಚಿ 2 ರಿಂದ 8 ಮತ್ತು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳಲ್ಲಿ ಹಿಸ್ಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು 2015 ರವರೆಗೆ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. 1984 ರಲ್ಲೇ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಅನುಸೂಚಿ 1 ನೇ ಸ್ವತ್ತನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 1 ನೇ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ದಾವಾ ಅನುಸೂಚಿ 1 ನೇ ಸ್ವತ್ತಿನ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ನೀರಾವರಿ ಜಮೀನು ಮತ್ತು ಹೆಚ್ಚು ಬೆಲೆ ಬಾಳುತ್ತಿರುವುದರಿಂದ ಆ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಒಟ್ಟು ಕುಟುಂಬದ ಸ್ವತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿ ದಾವಾ ಅನುಸೂಚಿ 1 ನೇ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 1 ನೇ ಸ್ವತ್ತಿನಲ್ಲಿ ಭಾಗಶಃ ಪಡೆಯಲು ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿಯ ಕಡೆಯವರು ಹಣ ಸಹಾಯ ಮಾಡಿ ದಾವಾ ಅನುಸೂಚಿ 1 ನೇ ಸ್ವತ್ತನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸಿದ್ದ ಸಂದರ್ಭದಲ್ಲಿ ಒಟ್ಟು ಕುಟುಂಬಕ್ಕೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು

ದಾವೆಯಲ್ಲಿ ಕೋರಿರುವಂತಹ ಪರಿಹಾರವನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**